# ಪರಿವರ್ತನೆ

ಟಿ.ಆರ್. ಉಷಾರಾಣಿ
ಕಲೆ: ಸಂತೋಷ್ ಸಸಿಹಿತ್ಲು

ನಗರದ ದೊಡ್ಡ ಶಾಲೆ ಅದು. ಅಲ್ಲಿ ಓದುತ್ತಿದ್ದವರೆಲ್ಲ ಬಹಳ ಸಿರಿವಂತರು. ರೈತನ ಮಗ ಶಿವ ಆರನೇ ತರಗತಿಗೆ ಹೊಸದಾಗಿ ಬಂದು ಸೇರಿದಾಗ ಸಹಪಾಠಿಗಳಿಗೆ ಅವನು ತಮ್ಮ ಜೊತೆ ಓದುವುದು ಇಷ್ಟವಾಗಲಿಲ್ಲ. ತಾವೇನು? ತಮ್ಮ ಅಂತಸ್ತೇನು? ತಮ್ಮ ಜೊತೆ ಸಾಮಾನ್ಯನಂತೆ ಕಾಣುವ ಶಿವ ಕುಳಿತು ಓದುವುದಾ ಎಂದು, ಅವನನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಳ್ಳಲು ನಿರಾಕರಿಸಿದರು. ಅವನು ಕೊನೆಯ ಬೆಂಚಿನಲ್ಲಿ ಒಬ್ಬನೇ ಕುಳಿತುಕೊಳ್ಳುತ್ತಿದ್ದ. ಯಾರೂ ಅವನ ಜೊತೆ ಮಾತನಾಡುತ್ತಿರಲಿಲ್ಲ. ಊಟವನ್ನೂ ಹಂಚಿಕೊಳ್ಳುತ್ತಿರಲಿಲ್ಲ. ಇದರಿಂದ ಅವನಿಗೆ ತುಂಬಾ ಕೀಳರಿಮೆ ಆಗುತ್ತಿತ್ತು. ಇದನ್ನೆಲ್ಲಾ ಗಮನಿಸಿದ್ದ ಹಿರಿಯರಾದ ಕನ್ನಡ ಪ್ರಾಧ್ಯಾಪಕರು ಸಮಾಜಕ್ಕೆ ರೈತರು ನೀಡುತ್ತಿರುವ ಕೊಡುಗೆ, ನಮ್ಮ ಭಾರತದ ಹಳ್ಳಿಗಳು, ಹೊಲ, ಗದ್ದೆ ಇವುಗಳ ಬಗ್ಗೆ ತಿಳಿಸಿ ಹೇಳಿದರು. ಆದರೂ ಹುಡುಗರಿಗೆ ಇದು ತಲೆಗೆ ಹೋಗಲಿಲ್ಲ. ಈ ಮಕ್ಕಳಿಗೆ ಬುದ್ಧಿ ಕಲಿಸಲೇಬೇಕೆಂದು ನಿರ್ಧರಿಸಿದರು.

ಒಂದು ಭಾನುವಾರ ರಜೆ ದಿನ ಆರನೆಯ ತರಗತಿಯ ಮಕ್ಕಳಿಗೆ ಮಾತ್ರ ಪ್ರವಾಸವೆಂದು ತಿಳಿಸಿದರು. ಮಕ್ಕಳಿಗೆಲ್ಲಾ ಖುಷಿಯೋ ಖುಷಿ. ಪ್ರವಾಸಕ್ಕೆ ಬೇಕಾದ ತಯಾರಿ ಮಾಡಿಕೊಳ್ಳಲು ಪ್ರಾರಂಭಿಸಿದರು. ಆದರೆ ಪ್ರಾಧ್ಯಾಪಕರು ನೀರಿನ ಬಾಟಲಿ ಹೊರತುಪಡಿಸಿ ಬೇರೇನನ್ನೂ ತರುವಂತಿಲ್ಲ ಎಂದರು. ಹೊರಗೆ ತಿನ್ನುವುದು ಮಕ್ಕಳಿಗೆ ಇನ್ನೂ ಸಂತೋಷದ ವಿಷಯ. ಮಕ್ಕಳನ್ನು ಹೊತ್ತ ಬಸ್ಸು ಸೀದಾ ಒಂದು ಹಳ್ಳಿಗೆ ಬಂದು ನಿಂತಾಗ ಎಲ್ಲರಿಗೂ ಆಶ್ಚರ್ಯ. ಹಳ್ಳಿಯ ತೊಟ್ಟಿ ಮನೆಯಲ್ಲಿ ಇವರಿಗೆ ಬಿಸಿ ಬಿಸಿ ಉಪ್ಪಿಟ್ಟು–ಕೇಸರಿಭಾತು ಮತ್ತು ಬೆಲ್ಲದ ಕಾಫಿಯ ಸಮಾರಾಧನೆಯಾದಾಗ ತಾವು ತಿನ್ನುವುದಿಲ್ಲವೆಂದು ತಮಗೆ ಸ್ಯಾಂಡ್‌ವಿಚ್, ಬರ್ಗರ್ ಪಿಜ್ಜಾ ಬೇಕೆಂದು ಹಟ ಹಿಡಿದರು. ಆದರೆ ತಿನ್ನದೇ ವಿಧಿಯೇ ಇರಲಿಲ್ಲ. ಅಲ್ಲಿಂದ ಅವರನ್ನು ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕಬಡ್ಡಿ, ಲಗೋರಿ, ಚಿನ್ನಿದಾಂಡು, ಗೋಲಿಯಾಟ, ಚೆಂಡಾಟವನ್ನು ಆಡಿಸಿದರು. ಊಟದಲ್ಲಿ ಮುದ್ದೆ ಸೊಪ್ಪಿನ ಸಾರು ಯಾರ ಗಂಟಲೊಳಗೂ ಇಳಿಯಲಿಲ್ಲ. ಆದರೆ ಆಟ ಆಡಿ ದಣಿದಿದ್ದ ಮಕ್ಕಳಿಗೆ ಅದೇ ಅಮೃತದಂತೆ ಕಂಡಿತು. ಅಲ್ಲಿಂದ ಅವರಿಗೆ ಹೊಲ–ಗದ್ದೆ, ಕುಯಿಲು ಮಾಡುವುದು ಇತ್ಯಾದಿಗಳ ಬಗ್ಗೆ ವಿವರ ನೀಡಿದರು. ಮಕ್ಕಳೆಲ್ಲಾ ಹೊಲದಲ್ಲಿ ಸಂತೋಷದಿಂದ ಸುತ್ತಾಡಿದರು. ಅವರಿಗೆ ಇದು ಹೊಸ ಪ್ರಪಂಚ.

ಅಲ್ಲಿಂದ ಗೋಶಾಲೆಗೆ ಕರೆದೊಯ್ದರು. ಆ ವಾಸನೆಗೆ ಎಷ್ಟೋ ಹುಡುಗರು ಒಳಗೆ ಬರಲೂ ಹಿಂದೇಟು ಹಾಕುತ್ತಿದ್ದರು. ಉಪಾಧ್ಯಾಯರನ್ನು ಚೆನ್ನಾಗಿ ಬೈದುಕೊಂಡರು. ಹಳ್ಳಿಗಾಡಿನ ಮಕ್ಕಳನ್ನು ತೋರಿಸಿದರು. ಸರಿಯಾದ ಬಟ್ಟೆ ಇಲ್ಲ ಪೆನ್ನು ಪುಸ್ತಕಗಳಂತೂ ಹೆಸರೇ ಇಲ್ಲ. ಆದರೂ ಎಲ್ಲರೂ ಸಂತೋಷವಾಗಿದ್ದರು.

ಸಮುದಾಯ ಭವನದಲ್ಲಿ ಉಪಾಧ್ಯಾಯರು ಹಳ್ಳಿಗಳು ನಮ್ಮ ದೇಶದ ಬೆನ್ನೆಲುಬು, ಇಲ್ಲಿ ಭತ್ತ (ಅಕ್ಕಿ) ಬೆಳೆದರೇನೇ ನಾವು ಹೊಟ್ಟೆ ತುಂಬಾ ಊಟ ಮಾಡಲು ಸಾಧ್ಯ ಎಂದು ಕೃಷಿಯ ಬಗ್ಗೆ ಭಾರತದ ಹಳ್ಳಿಗಳ ಬಗ್ಗೆ ಮಾತನಾಡಿದರು. 'ಹಸಿರೇ ಉಸಿರು' ಎಂಬ ಘೋಷ ವಾಕ್ಯವನ್ನು ಒತ್ತಿ ಹೇಳಿದರು. ಮಕ್ಕಳಿಗೆಲ್ಲಾ ಯಾವುದೋ ಬೇರೆ ಪ್ರಪಂಚಕ್ಕೆ ಬಂದಹಾಗಾಗುತ್ತಿತ್ತು. ಕಾರು, ಮೋಟಾರು ವಾಹನಗಳನ್ನು ಬಿಟ್ಟಿಳಿಯದ ಹುಡುಗರು ಇಂದು ಹಳ್ಳಿಗಾಡಿನ ಮಕ್ಕಳಂತೆ ಹಳ್ಳಿಯೆಲ್ಲಾ ಓಡಾಡಿದ್ದರು. ತಾವು ಅನ್ನದಾತರನ್ನು ಅವಮಾನಿಸಿದೆವಲ್ಲ ಎಂದು ತಮ್ಮ ಸಹಪಾಠಿ ಶಿವನ ಬಗ್ಗೆ ತೋರಿಸುತ್ತಿದ್ದ ತಾತ್ಸಾರಕ್ಕಾಗಿ ಮರುಗಿದರು. ಸಂಜೆ ಮಕ್ಕಳಿಗೆಲ್ಲಾ ಆಲೆಮನೆಯಲ್ಲಿ ಬಿಸಿಬೆಲ್ಲ ಕಬ್ಬಿನ ಹಾಲಿನ ಸೇವನೆಯಾಯ್ತು. ಉಪಾಧ್ಯಾಯರ ಗುರುತಿನವರ ಮಾವಿನ ತೋಪಿನಲ್ಲಿ ಆಡಿ ನಲಿದರು. ಹೊಸ ಪಾಠವನ್ನು ಕಲಿತ ಹುರುಪಿನಿಂದ ಮಕ್ಕಳು ತಮ್ಮೂರಿನತ್ತ ಸಾಗಿದರು.

